

ಅರಮನೆ ಆವರಣ


ಪೆಟ್ರೊನಾಸ್ ಅವಳಿ ಕಟ್ಟಡದ ಎದುರು ಲೇಖಕರು

ಸುಂದರವಾಗಿವೆ. ಆದರೆ ಟ್ರಾಫಿಕ್‌ನಲ್ಲಿ ನಮ್ಮ ಬೆಂಗಳೂರೇ ಬೆಟರ್ ಎನಿಸಿತು. ಕೌಲಾಲಂಪುರದ ಪೀಕ್ ಅವರ್‌ನಲ್ಲಿ ತೆವಳುವ ಟ್ರಾಫಿಕ್ ಯಾರ ಸಹನೆಯನ್ನೂ ಪರೀಕ್ಷೆಗೆ ಒಡ್ಡುತ್ತದೆ. 15 ಕಿ.ಮೀ. ದೂರ ಸಾಗಲು ಗಂಟೆಗಟ್ಟಲೆ ಸಮಯ ಬೇಕು! ಯಾವುದೇ ರಸ್ತೆ ಕಾಮಗಾರಿ, ಫ್ಲೈಓವರ್, ಮೆಟ್ರೊ ನಿರ್ಮಾಣ ನಡೆಯುತ್ತಿಲ್ಲ. ಬೆಂಗಳೂರಿನ ಟ್ರಾಫಿಕ್ ಕಿರಿಕಿರಿಗೆ ಇಂತಹ ನೆವವನ್ನಾದರೂ ಇಟ್ಟುಕೊಳ್ಳಬಹುದು. ಆದರೆ ಇಲ್ಲಿ ಈಗಾಗಲೇ ಮೊನೊ, ಮೆಟ್ರೊ ರೈಲು, ಫ್ಲೈಓವರ್‌ಗಳಿವೆ. ಆದರೂ ಟ್ರಾಫಿಕ್ ಜಾಮ್!

## ಸರ್ವಧರ್ಮಗಳ ನೆಲ

ಮಲೇಷ್ಯಾ ಸರ್ವ ಧರ್ಮಗಳ ನೆಲ ಎಂಬುದು ಪ್ರತಿ ಅಂಶದಲ್ಲೂ ಸಾಬೀತಾಗುತ್ತಿತ್ತು. ಮುಸ್ಲಿಂ, ಬೌದ್ಧ ಧರ್ಮೀಯರು, ಹಿಂದೂ, ಕ್ರಿಶ್ಚಿಯನ್ನರು ಅವರವರ ಧರ್ಮವನ್ನು ಆಚರಿಸುತ್ತಾರೆ. ಭಯೋತ್ಪಾದಕ ಕೃತ್ಯ, ಧಾರ್ಮಿಕ ಅಸಹನೆ ಇಲ್ಲವೇ ಇಲ್ಲವೇನೋ ಎಂಬಷ್ಟು ವಿರಳ ಅಲ್ಲಿ. ಮತದಾನ ಇರುವ, ಫೆಡರಲ್ ಆಡಳಿತ. ಕೆಲ ರಾಜ್ಯಗಳಿಂದ 5 ವರ್ಷಕ್ಕೊಮ್ಮೆ ಆಯ್ಕೆಯಾಗುವ ರಾಜ. ಫೆಡರಲ್ ಸಾಂವಿಧಾನಿಕ ರಾಜಪ್ರಭುತ್ವದ ದೇಶ. ಈಗೀನ ರಾಜ ಮುಕ್ತವಾಗಿ, ಸಾರ್ವಜನಿಕವಾಗಿ ಕಾಣಸಿಗುತ್ತಾರೆ ಎಂಬ ಮೆಚ್ಚುಗೆ ಮಾತುಗಳು ಕೂಡ ಅಲ್ಲಿ ಕೇಳಿಬಂದವು.

## ಪೆಟ್ರೊನಾಸ್ ಎಂಬ ಆಕರ್ಷಣೆ

ವಿಶ್ವದ ಅತಿ ಎತ್ತರದ ಜೋಡಿಗೋಪುರ ಎಂದು ಕರೆಸಿಕೊಂಡಿರುವ 'ಪೆಟ್ರೊನಾಸ್ ಟ್ವಿನ್ ಟವರ್' ಇಲ್ಲಿನ ಪ್ರಮುಖ ಆಕರ್ಷಣೆ. ಅದರ ಬುಡದಲ್ಲಿ ನಿಂತು ಫೋಟೊ ತೆಗೆಸಿಕೊಳ್ಳುವುದು ಇಲ್ಲಿಗೆ ಬರುವ ಪ್ರವಾಸಿಗರಿಗೆ ಬಲು ಖುಷಿ. ಪ್ರಪಂಚದ ಎರಡನೇ ಎತ್ತರದ ಕಟ್ಟಡ ಮರ್ದೇಕಾ ಸ್ಕ್ವಾರ್‌ಗೂ ಭೇಟಿ ನೀಡಿದೆವು. ಈಗಿರುವುದಲ್ಲದೇ ತಲೆ ಎತ್ತುತ್ತಿರುವ ಇನ್ನಷ್ಟು ಎತ್ತರದ ಕಟ್ಟಡಗಳನ್ನು ಕಂಡೆವು.

ಶೇ. 63.5ರಷ್ಟು ಮುಸ್ಲಿಂ ಜನಸಂಖ್ಯೆಯಿರುವ ಮಲೇಷ್ಯಾ ನೆಲದಲ್ಲಿ ಎತ್ತರದ ಮೂರ್ತಿಯ ಕಲ್ಪನೆ ಬಹುದೂರ ಎಂಬ ನಮ್ಮ ತರ್ಕ ಸುಳ್ಳಾಯಿತು. ಕೌಲಾಲಂಪುರ ಸಮೀಪದ ಬಟು ಗುಹೆಯಲ್ಲಿ ಸುಬ್ರಹ್ಮಣ್ಯನ (ಮುರುಗನ್) ಅತಿ ಎತ್ತರದ ವಿಗ್ರಹವನ್ನು ಕಣ್ತುಂಬಿಕೊಂಡೆವು. 42.7 ಮೀಟರಿನ ಈ ವಿಗ್ರಹದ ಜೊತೆಗೆ ಗುಹೆಗಳ ಸೊಗಸನ್ನೂ ಕಂಡೆವು.

ಬಟು ಗುಹೆಯ ಚಿನ್ನಲೇಪಿತ ಮುರುಗನ್ ಮೂರ್ತಿಗೆ ಸುಮಾರು 160 ವರ್ಷಗಳ ಇತಿಹಾಸವಿದೆ. ಈ ಕಲ್ಲಿನ ಗುಹೆಗಳಿಗೆ 499 ಮಿಲಿಯನ್ ವರುಷಗಳ ಹಿನ್ನೆಲೆ ಇರುವುದಾಗಿ ಇತಿಹಾಸ ಹೇಳುತ್ತದೆ. ಈ ಬಟು ಗುಹೆಗಳನ್ನು ದೇವಸ್ಥಾನ, ರಾಮಾಯಣ, ನೈಸರ್ಗಿಕ (ಡಾರ್ಕ್) ಎಂದು ಮೂರು ವಿಭಾಗಗಳಾಗಿ ವಿಂಗಡಿಸಲಾಗಿದೆ.

ಹೊಸ ವರುಷದ ಸ್ವಾಗತ ಸಂಭ್ರಮಾಚರಣೆ ಮಾಲ್‌ಗಳಲ್ಲಿ ನಡೆಯುತ್ತಿತ್ತು. ಪೊಂಗಲ್ ಹಬ್ಬದ ಶುಭಾಶಯ ಬ್ಯಾನರ್‌ಗಳನ್ನೂ ದಾರಿಯಲ್ಲಿ ಕಂಡೆವು. ದೇಶದಲ್ಲಿ ಹಲವು ಸುಂದರ ವಿಶಾಲ ಮಸೀದಿಗಳು ಇದ್ದವು. ವೈವಿಧ್ಯಮಯ ಜನ, ಭಾಷೆ, ಸಂಸ್ಕೃತಿ, ಆಹಾರ–ಆಚರಣೆಗಳನ್ನು ಒಟ್ಟಾಗಿ ಕಂಡು ಸಂತಸವಾಯಿತು.

## ದಿನಪತ್ರಿಕೆಗಳು ಅಪರೂಪ

ಮಲೇಷ್ಯಾದ ರಾಷ್ಟ್ರೀಯ ಭಾಷೆ ಮಲ್ಯೆ. ಇಂಗ್ಲೆಂಡ್‌ನ ಆಡಳಿತ ಇದ್ದುದರಿಂದ ಇಂಗ್ಲಿಷ್ ಇಲ್ಲಿ ಎಲ್ಲೆಲ್ಲೂ ನಡೆಯುತ್ತಿದೆ. ಮಲ್ಯೆಗೆ ಪ್ರತ್ಯೇಕ ಲಿಪಿ ಇಲ್ಲ. ಇಂಗ್ಲಿಷ್ ಉಪಯೋಗಿಸುವ ಲ್ಯಾಟಿನ್ ಲಿಪಿಯನ್ನೇ ಉಪಯೋಗಿಸುತ್ತದೆ. ಯಾವುದೇ ದಿನಪತ್ರಿಕೆಗಳು ನಾವಿದ್ದ ಪೂರ್ವ ಕೌಲಾಲಂಪುರದ ಹೋಟೆಲ್‌ನಲ್ಲಿ ಸಿಗಲಿಲ್ಲ. ಕೊರೊನಾ ಬಂದಮೇಲೆ ಎಲ್ಲವನ್ನೂ ನಿಲ್ಲಿಸಲಾಗಿದೆಯಂತೆ.

## ನಿಸರ್ಗದ ಮಡಿಲಲ್ಲಿ ಹೈಲ್ಯಾಂಡ್ಸ್

ಪ್ರವಾಸೋದ್ಯಮಕ್ಕೆ ಒತ್ತು ನೀಡಿರುವ ಮಲೇಷ್ಯಾ, ಪ್ರವಾಸಿಗರಿಗಾಗಿ ಕೃತಕ ಮನರಂಜನಾ ಅಮ್ಯೂಸ್‌ಮೆಂಟ್ ಪಾರ್ಕ್‌ಗಳನ್ನು ಸೃಷ್ಟಿಸಿದೆ. ಅಲ್ಲಿಗೆ ತಲುಪಲು ಕೇಬಲ್ ಕಾರ್ ವ್ಯವಸ್ಥೆ ಕೂಡ ಜೆಂಟಿಂಗ್ ಹೈಲಾಂಡ್ಸ್‌ನಲ್ಲಿದೆ. ಅದೇ ಪ್ರದೇಶದಲ್ಲಿ ವಿಶ್ವದಲ್ಲೇ ಅತಿ ದೊಡ್ಡ ಹೋಟೆಲ್ (7351 ರೂಂಗಳಿರುವ) ಎಂದು ಕರೆಸಿಕೊಂಡಿರುವ 'ಫಸ್ಟ್ ವರ್ಲ್ಡ್' ಹೋಟೆಲ್ ಇದೆ. ಬುದ್ಧನ ಬೃಹತ್ ಪ್ರತಿಮೆಯಿರುವ ಅಲ್ಲಿನ 'ಚೀನ್ ಸ್ವೀ' ಗುಹೆಗಳ ದೇಗುಲ ನಿಸರ್ಗದ ಮಧ್ಯೆ ತಳವೂರಿದೆ.

ಮಲೇಷ್ಯಾದ ಮತ್ತೂ ಒಂದು ಆಕರ್ಷಣೆ ರಾಫ್ಲೇಷಿಯಾ ಅರ್ನಾಲ್ಡಿ. ವಿಶ್ವದ ಬೃಹತ್ ಪುಷ್ಪ ಎಂದು ಕರೆಸಿಕೊಂಡಿರುವ ಇದು ಮಲೇಷ್ಯಾ ಹಾಗೂ ಇಂಡೊನೇಷ್ಯಾದ ಮಳೆಕಾಡು ಪ್ರದೇಶಗಳಲ್ಲಿ ಕಂಡುಬರುತ್ತದೆ. ಅಪರೂಪದ ಜೀವ ವೈವಿಧ್ಯಗಳಿಗೆ ಪೂರ್ವ ಮಲೇಷ್ಯಾ ಮಡಿಲೆನಿಸಿಕೊಂಡಿದೆ. ವಿಶ್ವ ಪಾರಂಪರಿಕ ಸ್ಥಳಗಳ ಪಟ್ಟಿಯಲ್ಲಿ ಮಲೇಷ್ಯಾದ ಜಾರ್ಜ್ ಟೌನ್, ಮಲಕ್ಕಾ, ಲೆಂಗಾಂಗ್ ವ್ಯಾಲಿ, ಗುನುಂಗ್ ಮುಲು ನ್ಯಾಷನಲ್ ಪಾರ್ಕ್ ಹಾಗೂ ಕಿನಬಾಲು ಪಾರ್ಕ್ ಜಾಗ ಗಿಟ್ಟಿಸಿಕೊಂಡಿವೆ.

ಭಾರತಕ್ಕಿಂತ ಹತ್ತು ವರ್ಷ ತಡವಾಗಿ ಬ್ರಿಟಿಷರಿಂದ ಸ್ವಾತಂತ್ರ್ಯ ಪಡೆದರೂ (31ನೇ ಆಗಸ್ಟ್, 1957) ಜೀವನಮಟ್ಟ, ತಲವಾರು ಆದಾಯ, ಸಾಕ್ಷರತೆ... ಹೀಗೆ ಹಲವು ಆಯಾಮಗಳಲ್ಲಿ ಮಲೇಷ್ಯಾ ಹೆಜ್ಜೆ ಮುಂದೆಯೇ ಇದೆ.

ಪ್ರತಿಕ್ರಿಯಿಸಿ: feedback@sudha.co.in